ಸಿ.ಸಿ. ನಂಬ್ರ: **1409/2020** **PW-**1

ದಿನಾಂಕ: 02.05.2025

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಬಿ. ಆರ್.ಎನ್ ರವರಿಂದ:**

ಸುಮಾರು 8 ವರ್ಷಗಳಿಂದ ದ್ವಿ ಚಕ್ರ ವಾಹನವನ್ನು ಓಡಿಸುತ್ತಿದ್ದು ಅದು ನನ್ನ ಅಣ್ಣನ ಹೆಸರಿನಲ್ಲಿ ಇತ್ತು. ನನ್ನ ಹೆಸರಿನಲ್ಲಿ ಯಾವುದೇ ವಾಹನ ಇಲ್ಲ. ನನ್ನ ಅಣ್ಣನ ಹೆಸರು ಶರತ್ . ಆರ್ ಸಿ ಪುಸ್ತಕವನ್ನು ಪೊಲೀಸರು ನನ್ನಿಂದ ಪಡೆದಿರುತ್ತಾರೆ. ಅಪಘಾತವಾದ ವೇಳೆಗೆ ನನ್ನ ತಂದೆಗೆ 55 ವರ್ಷ, ನನಗೆ 23 ವರ್ಷ. ನಾವು ಕುಂದಾಪುರದ ಕಡೆಗೆ ಬರುತ್ತಿದ್ದೇವು. ನನ್ನ ತಂದೆ ಹೆಲ್ಮೆಟ್ ಧರಿಸಿದ್ದರು. ಅಪಘಾತದ ರಸ್ತೆ ತಿರುವಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಪೊಲೀಸರು ಈ ಪ್ರಕರಣದಲ್ಲಿ ಮಾಡಿರುವ ನಕ್ಷೆಯನ್ನು ನಾನು ನೋಡಿಲ್ಲ. ಸಂಜೆ 6-30ರ ವೇಳೆಗೆ ಸ್ವಲ್ಪ ಕತ್ತಲೆಯಾಗಿತ್ತು. ಸುಮಾರು 500 ಮೀಟರ್ ದೂರದಿಂದ ಎದುರು ಬರುತ್ತಿದ್ದ ವಾಹನವನ್ನು ನೋಡಿರುತ್ತೇನೆ. ನನ್ನದ್ದು ಪಲ್ಸರ್ ಬೈಕು. ಆರೋಪಿಯದ್ದು ಸ್ಪೆಲ್ಲಂಡರ್ ಬೈಕು. ನನ್ನ ದ್ವಿ ಚಕ್ರ ವಾಹನವನ್ನು ವೇಗವಾಗಿ ಓಡಿಸಬಹುದು ಎಂದರೆ ಸರಿ. ನನ್ನ ದ್ವಿ ಚಕ್ರ ವಾಹನದ ಮುಂಭಾಗ ಅವರ ವಾಹನದ ಇಂಜಿನ್ ಭಾಗಕ್ಕೆ ತಾಗಿರುತ್ತದೆ.

ಸದ್ರಿ ಹೆದ್ದಾರಿ ಸುಮಾರು 18 ಅಡಿ ಇರಬಹುದು. ನನಗೆ ನಿಖರವಾಗಿ ಹೇಳಲಾಗುವುದಿಲ್ಲ. ಉತ್ತರ ಮತ್ತು ದಕ್ಷಿಣದಲ್ಲಿ 5 ಮತ್ತು 6 ಅಡಿ ಮಣ್ಣು ರಸ್ತೆ ಇತ್ತು ಎಂದರೆ ಸರಿ. ನನ್ನ ದ್ವಿ ಚಕ್ರ ವಾಹನ ಚಲಾಯಿಸಲು ರಸ್ತೆಯಲ್ಲಿ ಸುಮಾರು 3 ಅಡಿ ಸಾಕಾಗುತ್ತದೆ ಎಂದರೆ ಸರಿ. ವಾಹನವನ್ನು ಎದುರಿನಿಂದ ನೋಡಿ ನಾನು ಕೂಡಲೇ ಬ್ರೇಕು ಹಾಕಿರುತ್ತೇನೆ. ರಸ್ತೆಯ ಅಂಚಿನಿಂದ 3-4 ಮೀಟರ್ ಎಡಕ್ಕೆ ಅಪಘಾತ ಆಗಿರುತ್ತದೆ. ನಾನು ಬ್ರೇಕು ಹಾಕಿದ ಗುರುತು ರಸ್ತೆಯಲ್ಲಿ ಇದ್ದ ಬಗ್ಗೆ ನಾನು ನೋಡಿಲ್ಲ.

ಬಿದ್ದ ಕೂಡಲೇ ಸಾರ್ವಜನಿಕರು ನಮ್ಮನ್ನು ಆಸ್ಪತ್ರೆಗೆ ಕಳುಹಿಸಿದ್ದಾರಾ ಎಂದರೆ ಸಾಕ್ಷಿಯು ನಾನು ಎದ್ದು ತಂದೆಯನ್ನು ಕರೆದುಕೊಂಡು ಸ್ಥಳೀಯರ ಸಹಾಯದೊಂದಿಗೆ ಆಸ್ಪತ್ರೆಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು 19ನೇ ತಾರೀಕಿಗೆ ದೂರು ನೀಡಿರುತ್ತೇನೆ. ಅಪಘಾತವು 17ನೇ ರಂದು ಆಗಿರುತ್ತದೆ. 2 ದಿನ ವಿಳಂಬವಾಗಿ ದೂರು ನೀಡಿರುತ್ತೇನೆ ಎಂದರೆ ಸರಿ. ನಾನು ಲಿಖಿತವಾಗಿ ದೂರು ನೀಡಿರುತ್ತೇನೆ. ಪೊಲೀಸರು ಆಸ್ಪತ್ರೆಗೆ ಬಂದಾಗ ನಾನು ಬರೆದು ಕೊಟ್ಟಿರುತ್ತೇನೆ. ನಾನು ಬರೆದುಕೊಟ್ಟ

ದೂರು ನನ್ನ ಹಸ್ತಾಕ್ಷರದಲ್ಲಿ ಇರುತ್ತದೆ. ಅದರಲ್ಲಿ ನನ್ನ ತಂದೆ ಧರಿಸಿದ್ದ ಹೆಲ್ಮೇಟ್ ನ ಬಗ್ಗೆ ದೂರಿನಲ್ಲಿ ಬರೆದಿರುತ್ತೇನೆ. ಸಾಕ್ಷಿ ನಿಪಿ-1ನ್ನು ನೋಡಿ ಅದನ್ನು ತಾನು ಬರೆದಿಲ್ಲ ಎಂದು ನುಡಿಯುತ್ತಾರೆ. ಸಂಚಾರಿ ಪೊಲೀಸರು ಬರೆದಿರುವುದಾಗಿ ನುಡಿಯುತ್ತಾರೆ. ನಾನು ಹೇಳಿದ್ದನ್ನು ಅವರು ಬರೆದುಕೊಂಡಿರುತ್ತಾರೆ. ನನ್ನತಂದೆ ಹೆಲ್ಮೇಟನ್ನು ಧರಿಸಿದ್ದಾರಾ ಎಂದು ಆಗ ವಿಚಾರ ಹೇಳಿರುವುದು ಈಗ ನೆನಪಿಲ್ಲ.

ನನ್ನ ಗಾಡಿಯ ಎದುರು ಭಾಗಕ್ಕೆ ಜಖಂ ಆಗಿರುತ್ತದೆ. ನನ್ನ ಹೆಲ್ಮೇಟು ಹಾರಿ ಹೋಗಿರುತ್ತದೆ. ಎದುರುಭಾಗದವರಿಗೆ ಏನಾಗಿತ್ತು ಎಂದು ನನಗೆ ತಿಳಿದಿಲ್ಲ. ಆದರೆ ಆತ ಬಿದ್ದಿದ್ದರು. ನನಗೆ ಮತ್ತು ನನ್ನ ತಂದೆಗೆ ವಿಮಾ ಪರಿಹಾರ ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿ. ಸ್ಥಳದಲ್ಲಿ ಎಷ್ಟು ಅಂಗಡಿಗಳು ಇತ್ತು ಎಂಬುದರ ಬಗ್ಗೆ ನನಗೆಮಾಹಿತಿ ಇಲ್ಲ. ಸುತ್ತಮುತ್ತಲೂ ಸ್ಥಳೀಯರ ವಾಸ್ತವ್ಯ ಇತ್ತು. ಅಲ್ಲಿಂದ ಪಂಚಾಯಿತಿ ಎಷ್ಟು ದೂರದಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ಚಾಸಾ-2 ನನ್ನ ಪರಿಚಯಸ್ಥರು. ಅವರು ನಮ್ಮ ಊರಿನ ಪಕ್ಕದವರು. ಅಪಘಾತದ ಸ್ಥಳದಿಂದ ನಮ್ಮ ಊರು 4-5 ಕಿ.ಮೀ ದೂರದಲ್ಲಿ ಇರುತ್ತದೆ.

ತನಿಖಾವಧಿಯಲ್ಲಿ ಪೊಲೀಸರು ಘಟನಾ ಸ್ಥಳದಲ್ಲಿ ಏನು ಕ್ರಮ ವಹಿಸಿದ್ದಾರೆ ಎಂದು ನನಗೆ ತಿಳಿದಿಲ್ಲ. ಅಲ್ಲಿನ ಸ್ಥಳೀಯರನ್ನು ವಿಚಾರಿಸಿದ್ದ ಬಗ್ಗೆ ನನಗೆ ತಿಳಿದಿಲ್ಲ. ಸ್ಥಳದಲ್ಲಿ ಎಷ್ಟು ಜನರು ಸೇರಿದ್ದರು ಎಂದು ತಿಳಿದಿಲ್ಲ. ಸುಮಾರು 8-10 ಜನರು ಸೇರಿರಬಹುದು, ಹೆಚ್ಚು ಕಡಿಮೆ ಇರಬಹುದು. ಆದ್ದರಿಂದ ನಿಖರವಾಗಿ ಅಲ್ಲಿ ಬಂದವರ ಪರಿಚಯ ಹೇಳಲಾಗುವುದಿಲ್ಲ. ಅಟೋ ಯಾರದ್ದು ಎಂದು ತಿಳಿದಿಲ್ಲ. ಎದುರು ಭಾಗದ ಬೈಕಿಗೆ ಎಲ್ಲಿ ಜಖಂ ಆಗಿತ್ತು ಎಂದು ನಾನು ನೋಡಿಲ್ಲ. ರಸ್ತೆಯ ಎರಡೂ ಭಾಗಗಳಲ್ಲೂ ಜಾಗ ಇದ್ದ ಕಾರಣ ಅಪಘಾತ ತಪ್ಪಿಸಲು ಅವಕಾಶ ಇತ್ತು ಎಂದರೆ ಸಾಕ್ಷಿ ಎದುರು ಮತ್ತು ಹಿಂದಿನಿಂದ ಕಾರುಗಳು ಬರುತ್ತಿದ್ದವು ಎಂದು ನುಡಿಯುತ್ತಾರೆ.

ರಸ್ತೆಯ ಎರಡೂ ಬದಿಯಲ್ಲಿ ಜಾಗವಿತ್ತು ನಾನು ಎದುರು ಬದಿಗೆ ಹೋಗುತ್ತಿದ್ದರೆ ಅದು ತಪ್ಪಾದ ಮಾರ್ಗವಾಗುತ್ತಿತ್ತು. ರಸ್ತೆಯ ಮಧ್ಯ ಭಾಗದಲ್ಲಿ ನಾನು ದ್ವಿ ಚಕ್ರ ವಾಹನ ಚಲಾಯಿಸಿ ಆರೋಪಿಯ ವಾಹನಕ್ಕೆ ಡಿಕ್ಕಿಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಹಿಂದುಗಡೆ ನನ್ನ ತಂದೆ ಸಹ ಸವಾರರಾಗಿ ಕುಳಿತಿದ್ದು ತಿರುವಿನಲ್ಲಿ ಒಂದು ಕಡೆ ಭಾಗಿದ್ದ ಕಾರಣ ನಿಯಂತ್ರಣ ತಪ್ಪಿ ನಾನೇ ಹೋಗಿ ಆರೋಪಿ ಚಲಾಯಿಸುತ್ತಿದ್ದ ದ್ವಿ ಚಕ್ರ ವಾಹನಕ್ಕೆ ಡಿಕ್ಕಿಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ ನನ್ನ ತಪ್ಪಿ ನಿಂದ ಈ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಅಪಘಾತವಾದ ವೇಳೆಯಲ್ಲಿ ನಾನು

ಬೇರೆ ವಾಹನವನ್ನು ಚಲಾಯಿಸುತ್ತಿದ್ದು ವಿಮಾ ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ನನ್ನ ಅಣ್ಣನ ದ್ವಿ ಚಕ್ರ ವಾಹನವನ್ನು ಕಾಣಿಸಲಾಗಿದೆ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿಯಲ್ಲಿ ಅಪಘಾತ ಸಂಭವಿಸಿಲ್ಲದೆ ನನ್ನ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ವಿಮಾ ಪರಿಹಾರಕ್ಕೆ ಪೂರಕವಾಗಿ ಪೊಲೀಸರೊಂದಿಗೆ ಶಾಮೀಲಾಗಿ ಅದಕ್ಕೆ ಅನುಗುಣವಾಗಿ ನನ್ನ ಹೇಳಿಕೆಯನ್ನು ನಿಪಿ-1 ರಂತೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ